ಸಾಕ್ಷಿಯು ಕ್ರಮವಾಗಿ ಪ್ರಮಾಣಿಕರಿಸಿದ ದಿನಾಂಕಃ **24-01-2025**

ಮುಂದುವರೆದ ಪಾಟಿ ಸವಾಲುಃ ಶ್ರೀ. ಪಿ.ಜಿ.ಎಂ ವಕೀಲರಿಂದ

ಆರೋಪಿ ಕೊಟ್ಟ ಚೆಕ್ ನಂ.**014335** ಇರುತ್ತದೆ. ದಿಃ**18-08-2022** ರಂದು ಬ್ಯಾಂಕಿಗೆ ಹಾಜರುಪಡಿಸಿರುತ್ತೇನೆ. ಅಕೌಂಟ್ ಕ್ಲೋಸ್ ಎಂದು ಹಿಂಬರಹ ಬಂದಿರುತ್ತದೆ. ಯಾವಾಗ ಕ್ಲೋಸ್ ಆಗಿರುತ್ತದೆ ಎಂದು ವಿಚಾರಿಸಿಲ್ಲ. ನಾನು ಆದಾಯ ತೆರಿಗೆ ಪಾವತಿ ಮಾಡುತ್ತೇನೆ. ಸಾಲದ ಬಗ್ಗೆ ಆದಾಯ ತೆರಿಗೆ ಇಲಾಖೆಗೆ ತಿಳಿಸಿಲ್ಲ, ತಿಳಿಸಲು ತೊಂದರೆ ಇರಲಿಲ್ಲ. ಈ ಪ್ರಕರಣದ ಹಣ ಕೊಡುವ ಮುಂಚೆ ಸಹ ಆರೊಪಿ ನನ್ನಿಂದ ಸಾಲ ಪಡೆದಿರುತ್ತಾರೆ. ಸಾಲದ ಭದ್ರತೆಗಾಗಿ ಚೆಕ್ ಅನ್ನು ಪಡೆದಿರುತ್ತೇನೆ. ಸಾಲ ಕೊಟ್ಟ ದಿನವೇ ಚೆಕ್ ಕೊಟ್ಟಿಲ್ಲ. **20** ಸಾವಿರಕ್ಕಿಂತ ಹೆಚ್ಚಿನ ಹಣವನ್ನು ನಗದು ರೂಪದಲ್ಲಿ ಕೊಡಬಾರದು ಎಂದು ನಿಯಮ ಇದೆ ಎಂದರೆ ಸರಿ. ನಾನು ಹಣ ಕೊಡುವಾಗ ಆ ರೀತಿ ನಿಯಮ ಇರಲಿಲ್ಲ. ಚೆಕ್ ಅನ್ನು ಆರೋಪಿ ಬರೆದಿರಬಹುದು, ನನ್ನ ಮುಂದೆ ಬರೆದಿರುವುದಿಲ್ಲ, ಅದನ್ನು ನನಗೆ ಕೊಟ್ಟಿರುತ್ತಾರೆ. ಚೆಕ್ ಅನ್ನು ಕುಶಾಲನಗರದ ಆರೋಪಿ ಮನೆಯಲ್ಲಿ ಕೊಟ್ಟಿರುತ್ತಾರೆ.

ಚೆಕ್ ನಲ್ಲಿರುವ ಸಹಿ ಮತ್ತು ಅಕ್ಷರಗಳಿಗೆ ವ್ಯತ್ಯಾಸ ಇದೆ ಎಂದರೆ ನನಗೆ ಗೊತ್ತಿಲ್ಲ. ಬೇರೆ ಯಾರಿಗೂ ಸಾಲ ಕೊಟ್ಟಿಲ್ಲ. ಕಾಫಿ ಮಾರಿದ ಹಣ ಮತ್ತು ಕಟ್ಟಡದ ಬಾಡಿಗೆ ಹಣದಿಂದ ಆರೋಪಿಗೆ ಸಾಲ ಕೊಟ್ಟಿರುತ್ತೇನೆ. ನನ್ನ ಬಳಿ **6** ಲಕ್ಷ ಹಣ ಇದ್ದ ಬಗ್ಗೆ ದಾಖಲೆ ಇಟ್ಟುಕೊಂಡಿಲ್ಲ. ಸೋಮವಾರಪೇಟೆ ಪಟ್ಟಣನದಲ್ಲಿ ನನಗೆ ಸೇರಿದ **6** ಮನೆಗಳು, **9** ಅಂಗಡಿಗಳು ಬಾಡಿಗೆಗೆ ಕೊಟ್ಟಿರುತ್ತೇನೆ, ಅವುಗಳಿಂದ ಬಾಡಿಗೆ ಬರುತ್ತದೆ. ಬಾಡಿಗೆದಾರರು ಖಾತೆಗೆ ಹಣ ಹಾಕುತ್ತಾರೆ ಎಂದರೆ ಸರಿಯಲ್ಲ. ಬಾಡಿಗೆ ಹಣಕ್ಕೆ ರಶೀದಿ ಕೆಲವರಿಗೆ ಕೊಡುತ್ತೇನೆ. ಅದನ್ನು ಹಾಜರುಪಡಿಸಲು ತೊಂದರೆ ಇಲ್ಲ. ಆರೋಪಿ **2013** ರಲ್ಲಿ **5** ಲಕ್ಷ ಸಾಲ ನನ್ನಿಂದ ಪಡೆದಿದ್ದರು ಎಂದರೆ ಸರಿಯಲ್ಲ. ನನಗೆ

ಎಸ್.ಬಿ.ಐನಲ್ಲಿ ಖಾತೆ ಇರುತ್ತದೆ. ದಿಃ**06-04-2014** ರಂದು **1,00,004/-** ಹಣ ಪಾವತಿ ಮಾಡಿದ್ದಾರೆ ಎಂದರೆ ಸರಿಯಲ್ಲ. ದಿಃ**08-04-2016** ರಂದು **2** ಲಕ್ಷ ನಗದು ಹಣ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಐಗೂರಿನ ವಿಜಯ ಬ್ಯಾಂಕ್ ನಲ್ಲಿ ಖಾತೆ ಇರುತ್ತದೆ. ದಿಃ**11-04-2015** ರಂದು **36,000/-** ಸದರಿ ಖಾತೆಗೆ ಹಾಕಿದ್ದಾರೆ ಎಂದರೆ ಸರಿಯಲ್ಲ. **5** ಲಕ್ಷ ಬಡ್ಡಿ ಹಣ ನೀಡಿದ್ದಾರೆ ಎಂದರೆ ಸರಿಯಲ್ಲ.

ಆರೋಪಿ ನನಗೆ **3,36,000/-** ಅಸಲು ಹಣ ಮತ್ತು **5** ಲಕ್ಷ ಬಡ್ಡಿ ಹಣ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಬಾಕಿ **1,64,000/-** ಹಣ ಮಾತ್ರ ಕೊಡಬೇಕು ಎಂದರೆ ಸರಿಯಲ್ಲ. ಆರೋಪಿ **2013** ರಲ್ಲಿ ಪಡೆದ **5** ಲಕ್ಷ ಹಣದಲ್ಲಿ **3,36,000/-** ಹಣ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. **1,64,000/-** ಮಾತ್ರ ಕೊಡಬೇಕು ಎಂದರೆ ಸರಿಯಲ್ಲ. **2013** ರಲ್ಲಿ ಭದ್ರತೆಗಾಗಿ ಕೊಟ್ಟಿದ್ದ ಚೆಕ್ಕನ್ನು ದುರುಪಯೋಗ ಪಡಿಸಿಕೊಂಡು ಈ ಸುಳ್ಳು ಪ್ರಕರಣ ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ. ಗುತ್ತಿಗೆ ಕೆಲಸಕ್ಕೆ ಹಣ ಕೊಟ್ಟಿರುತ್ತೇನೆ ಎಂದು ನಮ್ಮ ವಕೀಲರಿಗೆ ತಿಳಿಸಿಲ್ಲ. ಆ ರೀತಿ ತಿಳಿಸಲು ತೊಂದರೆ ಇಲ್ಲ. ನಾನು ಸುಳ್ಳು ಪ್ರಕರಣ ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿ ನನ್ನಿಂದ **2021** ಜೂನ್ ನಲ್ಲಿ **6** ಲಕ್ಷ ಸಾಲ ಪಡೆದಿಲ್ಲ ಎಂದರೆ ಸರಿಯಲ್ಲ.

ಪಾಟಿ ಸವಾಲು ಮುಕ್ತಾಯವಾಯಿತು.

ಮರು ವಿಚಾರಣೆ ಇಲ್ಲ

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ).**

**ಸಹಿ/-**

**ಓ ಹೇ ಕೇ ಸರಿ ಇದೆ**

**ಪ್ರ ದ ನ್ಯಾ ದಂ ಸೋ ಪೇಟೆ**